# ಎಲ್ಲವೂ ಆಗುವುದು ನಮ್ಮ ಒಳ್ಳೆಯದಕ್ಕೇ



ರಾಜನೊಬ್ಬನು ಮಂತ್ರಿಯೊಡನೆ ಬೇಟೆಗೆ ಹೋಗಿದ್ದನು. ಅಲ್ಲಿ ಅಲೆದಾಡುತ್ತಿರುವಾಗ ರಾಜನು ಎಡವಿಬಿದ್ದು ಗಾಯಗೊಂಡನು – ಅವನ ಎಡಗಾಲಿನ ಬೆರಳೇ ಕತ್ತರಿಸಿಹೋಗಿತ್ತು. "*ಆದದ್ದೆಲ್ಲ ಒಳಿತೇ ಆಯಿತು*" ಎಂದನು ಮಂತ್ರಿ. ರಾಜನಿಗೆ ವಿಪರೀತ ಕೋಪ ಬಂದಿತು. ಅವನು ಕೋಪದಲ್ಲಿ ತಾನೇನು ಮಾಡುತ್ತಿರುವೆನೆಂದು ತಿಳಿಯದೆ ಮಂತ್ರಿಯನ್ನು ಒಂದು ಬಾವಿಗೆ ತಳ್ಳಿ, ತಾನು ಮುಂದುವರಿದನು.

ಕೆಲವು ಕಾಳೀ ಉಪಾಸಕರು ಕಾಳಿಗೆ ನರಬಲಿ ಕೊಡಬೇಕೆಂದು ಒಳ್ಳೆಯ ವ್ಯಕ್ತಿಗಾಗಿ ಹುಡುಕುತ್ತಿದ್ದರು. ರಾಜನು ಒಬ್ಬನೇ ಇರುವುದನ್ನು ಕಂಡು ಅವನ ಮೇಲೆ ಎರಗಿ ಹಿಡಿದು ಕೊಂಡುಹೋದರು. ಕಾಳಿಯ ಮುಂದೆ ಅವನನ್ನು ನಿಲ್ಲಿಸಲಾಯಿತು. ಪುರೋಹಿತನು ಬಂದು ಅವನನ್ನು ಪರೀಕ್ಷೆ ಮಾಡಿದನು. ಅವನ ಕಾಲ್ಬೆರಳು ಕತ್ತರಿಸಿ ಹೋಗಿರುವುದನ್ನು ಕಂಡು ಅವನು ಹೇಳಿದ: ಇವನು ಬಲಿಗೆ ಅಯೋಗ್ಯ. ಇವನ ಬೆರಳು ಕತ್ತರಿಸಿ ಹೋಗಿದೆ." ಆಗ ಅವನನ್ನು ಬಿಟ್ಟು ಬಿಟ್ಟರು.

ರಾಜನು ಈಗ ಮಂತ್ರಿಯು ಬಿದ್ದಿದ್ದ ಬಾವಿಯ ಹತ್ತಿರ ಬಂದನು. ಮಂತ್ರಿಯು ಒಂದು ಬಳ್ಳಿಯನ್ನು ಹಿಡಿದುಕೊಂಡು ನೇತಾಡುತ್ತಿದ್ದನು, ಮತ್ತು ದೇವರನ್ನು ಪ್ರಾರ್ಥಿಸುತ್ತಿದ್ದನು. ರಾಜನು ಅವನನ್ನು ಮೇಲಕ್ಕೆತ್ತಿ ನಡೆದದ್ದನ್ನು ವಿವರಿಸಿದನು. ತಾನು ಕೋಪದಲ್ಲಿ ಮಾಡಿದ ತಪ್ಪಿಗಾಗಿ ಕ್ಷಮೆ ಯಾಚಿಸಿದನು.

ಮಂತ್ರಿ ಹೇಳಿದ : "ಆದದ್ದೆಲ್ಲ ಒಳಿತೇ ಆಯಿತು."

"ಹೇಗೆ?" ಎಂದು ರಾಜ ವಿಚಾರಿಸಿದಾಗ ಮಂತ್ರಿ ವಿವರಿಸಿದ : "ಎಲೈ ರಾಜನೇ, ನಾನು ನಿನ್ನೊಡನೆ ಬಂದಿದ್ದರೆ ಆ ಕಾಳೀ ಉಪಾಸಕರು ನನ್ನ ದೇಹದಲ್ಲಿ ಯಾವ ಊನವೂ ಇಲ್ಲದಿರುವುದನ್ನು ಕಂಡು ನಿನ್ನ ಬದಲು ನನ್ನನ್ನು ಕಾಳಿಗೆ ಬಲಿ ಕೊಡುತ್ತಿದ್ದರು!" ರಾಜನು ತನ್ನ ಮಂತ್ರಿಯ ಜಾಣ್ಮೆಗೆ ಮೆಚ್ಚಿದನು. ※

ಕಲೆ : ಸೋಮಶೇಖರ